Regd No M 1299 SATYAVADI

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 9೪] ಮಂಗಳವಾರ 10—2—48 [ಬಿಡಿ ಪ್ರತಿ 3 ಪೈ

ದೇವರು, ಅಹಿಂಸೆಯೇ ತತ್ವ,
ಪ್ರೇಮವೇ ಧ್ಯೇಯ ಎಂದು
ಜಗತ್ತಿಗೆ ಬೋಧಿಸಿದ

ಮಹಾತ್ಮಾ ಗಾಂಧೀಜಿ

ನಮ್ಮನ್ನಗಲಿದ 12 ನೆ ದಿನ

ಭಾರತ ಮಂತ್ರಿಗಳಿಗೆ ಹೆಚ್ಚು ರಕ್ಷಣೆ

ಮದನಪಲ್ಲಿಯ ಹತ್ತಿರ ಒಂದು ಹಳ್ಳಿಯಲ್ಲಿ ಅನೇಕ ಜನರು ಪ್ರತಿ ಶುಕ್ರವಾರವೂ ಸೇರುತ್ತಾರೆ. ಅಲ್ಲೊಂದು ಸ್ಥಳವನ್ನು ಪ್ರದಕ್ಷಣೆ ಮಾಡಿದರೆ ಜನರ ಬೇಸೆ ಕಾಟ ಪೀಡೆಗಳು ನಿವಾರಣೆ ಹೊಂದುವುವಂತೆ. ಅಲ್ಲೊಬ್ಬ ಬ್ರಾಹ್ಮಣೇತರ ಹಿಂದೂ ಮಹಿಳೆಯು ಉರ್ದು ಭಾಷೆಯನ್ನೇ ಅರಿಯದಿದ್ದರೂ ಕಂಠೋಕ್ತವಾಗಿ ಕುರಾನು ಪಠಣ ಮಾಡುವಳಂತೆ

ಂ ಂ

ಕುಷ್ಟಿಯಾ ಹೈಸ್ಕೂಲಿನ 100 ಮೆಟ್ರಿಕ್ ವಿದ್ಯಾರ್ಥಿಗಳಿಂದ ತಲೆಗೆ ನಾಲ್ಕಾಣೆಯಂತೆ ಕಾಯಿದೆ ಅಜಂ ಜಿನ್ನಾ ಧನ ನಿಧಿಗೆ ಕೂಡಿಸಲಾಯಿತು.

ಂ ಂ

ಲಂಡನ್— ಈಚೆಗೆ ಕೆಲಸಗಾರರ ಹೊತ್ತನ್ನು ಬಹಳ ಕಡಮೆ ಮಾಡಿದ್ದು 1947 ರಲ್ಲಿ. ಇದರಿಂದ 180 ಲಕ್ಷ ಗಂಟೆ ನಷ್ಟವಾಗಿದೆ.

ಂ ಂ

ಮಿರತ್ ಫೆ 7— ವಿಶಾಖಪಟ್ಟಣದಲ್ಲಿ ಸೆಕ್ಷನ್ ಜಾರಿನೂಡಲಾಗಿದೆ.

ನವದೆಹಲಿ ಫೆ 8.... ಭಾರತ ಮಂತ್ರಿಗಳಿಗೆ ಹೆಚ್ಚು ರಕ್ಷಣೆ ಕೊಡಲಾಗಿದೆ. ಅವರ ಗೃಹಗಳಲ್ಲಿ ಸಶಸ್ತ್ರ ಪಹರೆ ಇಡಲಾಗಿದೆ.

ಬೆಂಗಳೂರು ಫೆ—ಹಿಂದೂ ಮಹಾಸಭೆಗೆ ಇಬ್ಬರು ಮುಸ್ಲಿಂರು ಸದಸ್ಯರಾಗಿ ಸೇರಿದರು.

ನವದೆಹಲಿ— ಗಾಂಧೀಜಿ ಸ್ಮಾರಕ ನಿಧಿಗೆ ಮೊದಲನೆ ಚಂದ ಶ್ರೀ ರಾಜೇಂದ್ರ ಪ್ರಸಾದರದು, ರೂ 2000

ಕರಾಚಿ .... ಸಿಂಧ್ ಪ್ರಾಂತ್ಯದಿಂದ ಕರಾಚಿಯನ್ನು ಬೇರ್ಪಡಿಸುವ ಯೋಜನೆಯನ್ನು ಲೀಗು ಕೌನ್ಸಿಲ್ ಪ್ರತಿಭಟಿಸಿದೆ.

ಮದರಾಸು.... ಮದರಾಸಿಗೆ ತಂದಿಟ್ಟಿರುವ ಗಾಂಧೀಜಿ ಬೂದಿಯಲ್ಲಿ ತಮಗೂ ಪಾಲು ಕೊಡಿರೆಂದು 5 ಸಾವಿರಕ್ಕೂ ಮೇಲ್ಪಟ್ಟ ವಿನಂತಿಗಳು ಬಂದಿವೆ.

ಬೆಳಗಾಂ ಫೆ 8 — ಶ್ರೀ ದಾವರು ಕಾಂಗ್ರೆಸ್ ಸ್ವಯಂಸೇವಕರೊಡಗೂಡಿ ಅಜ್ರಾವಿಗೆ ಹೋಗಿ ಅಲ್ಲಿ ತೊಂದರೆಗೀಡಾಗಿದ್ದ 40 ಮಂದಿ ಬ್ರಾಹ್ಮಣ ಸ್ತ್ರೀಯರನ್ನು ರಕ್ಷಿಸಿದರು.

ಜಮ್ಮು ಫೆ 8.... — ಕಾಶ್ಮೀರಿಂದ ಮೇಲೆ ಒಂದ ಧಾಳಿಕಾರರನ್ನು ಹೊಡೆದೋಡಿಸಲಾಯಿತೆಂದೂ ಎರಡು ಸಾವಿರ ಮಂದಿ ಹತರಾದರು

ಜೋಹನ್ಸ್‌ಬರ್ಗ್ ಫೆ 9.... ದ. ಆಫ್ರಿಕಾ ಸತ್ಯಾಗ್ರಹ ಸಂಬಂಧವಾಗಿ ಮತ್ತೆ ಹೆಚ್ಚು ಜನರು ನೇಟಾಲಿನಿಂದ ಟ್ರಾನ್ಸ್‌ವಾಲಿಗೆ ಹೋದ್ದಾರೆ

ಮದರಾಸಿನ ಡಾ || ಅಲಗಪ್ಪ ಚೆಟ್ಟಿಯಾರವರು ದ. ಭಾರತದಲ್ಲಿ ಎಲೆಕ್ಟ್ರೋ ಕೆಮಿಕಲ್ ರಿಸರ್ಚಸ್ ಇನ್‌ಸ್ಟಿಟ್ಯೂಟು ಸ್ಥಾಪನೆಗಾಗಿ 15 ಲಕ್ಷ ರೂ. ಉದಾರ

ಗಾಂಧೀ ಜಿಂದಾಬಾದ್

ಗಾಂಧೀಜಿಯು ನಿರ್ಮಾಣವು ಭಾರತ ದೇಶ ಒಂದಕ್ಕೇ ಅಲ್ಲದೆ ಪ್ರಪಂಚಕ್ಕೆಲ್ಲಾ ತೀರದ ನಷ್ಟವು. ಗಾಂಧೀಜೀ ನಮ್ಮ ಮಹೋತ್ತಮ ರಾಜಕೀಯ ನಾಯಕರೇ ಅಲ್ಲದೆ ಮಾನವ ಜಾತಿಯಲ್ಲಿ ಸಾಧಾರಣ ಮಾನವನ ಗೌರವವನ್ನು ಸಾರಿದ ಪ್ರಪಂಚ ನಾಯಕರು. ಕಾಲವು ಕಳೆದಂತೆಲ್ಲಾ ಯ ಭೇದಾಭಿಪ್ರಾಯಗಳು ಮಬಲ್ಲವು ಬಂಲಿರುವ ಶತಾಬುದ್ಧ, ಕ್ರಿಸ್ತನಂತೆ ಪ್ರಪಂಚದ ವಾಗಿ ಗಾಂಧಿಯ ಜೀವನವು ಪ್ರಬಲ್ಲದು. ನಿರ್ಮಲವಾದ ಜೀವಿ ಮಾನವನ ಆದರ್ಶವಾಗಿ ಇಂಜೀತಾವು ಜೀವಿಂದಿರುವವರೆಗೂ ಒಂ ಆದರ್ಶಕ್ಕಾಗಿ ಹೋರಾಡಿದನು. ಮವರು ಹೀಗೆ ಹೋರಾಡುತ್ತಿರುವವರೆ ಗಾಂಧೀಜಿ ಮತ್ತು ಅತನ ಉಪದೆಗಳು ಜೀವಿಸಿರಬಲ್ಲವು.

ಗಾಂಧೀಜೀ ಜಿಂದಾಬಾದ್

[ಮೂ. ಭೂ.

ಮಣ್ಣು ತಿನ್ನುವ ಮಹಾತಾಯಿ

ಲ್ಯಾಂಕ್‌ಷಾಯರ್‌ದಲ್ಲೊಬ್ಬ ವತ್ತಾರು ವರ್ಷದ ಮಹಿಳೆಯು ಸಮಯು ಬಂದಾಗಲೆ ಮಣ್ಣಿನ ಕೊಳವೆ ಅಥವಾ ಕೊಳವೆ ಮಣ್ಣನ್ನು ತಿನ್ನುವಳೆಂದೂ ಹೀಗೆ ಹತ್ತು ಪೌಂಡ್ಗಳನ್ನು ಹೆಡದಿರುವಳೆಂದೂ ಬ್ರಿಟೀಷ್ ವೈದ್ಯಕೀಯ ಪತ್ರಿಕೆಯು ಪ್ರಕಟಿಸಿದೆ.

ಜಪಾನ್ ಚಕ್ರವರ್ತಿ ಸಾಹಸ

ಜಪಾನಿನ ಅಂಸು ಹಿರೋಹಿಟೋ ಇವರ ಸಾಹಸದ ಬಗ್ಗೆ ಅಮೇರಿಕೆಯ ಪತ್ರಿಕೆ ಬರೆಯುವುದೇನೆಂದರೆ —

ಹಿರೋಹಿಟೋ ತಮ್ಮ ಕಾಲ ಹೆಬ್ಬರಳಿನಿಂದ ಬೀಸಣಿಕೆ ಬೀಸಿಕೊಳ್ಳಬಲ್ಲರು ಈಜಬಲ್ಲರು ಹೀಗೆ ಮಾಡಬಲ್ಲರು ನಳೆ ಬರುವಾಗ ಒಂದು ಕೈಯಲ್ಲಿ ಕೊಡೆ ಹಿಡಿದುಕೊಂಡು ಈಜಬಲ್ಲರು.

ಹಾ ಗಾಂಧಿ, ಹಾ ಗಾಂಧಿ |
ಅಗಲಿದಿರಾ ನೀವಿಂದು
ಭಾರತವು ಬರಿದಾಯ್ತು |
ಭಾರತದ ಸಿರಿ ಹೋಯ್ತು |
ವೀರಸ್ವರ್ಗವನಿಂದು | ನೀನೆಲ್ಲ ಪಡೆದಾಯ್ತು || ೧ ||

ಶಾಂತಿ ಸಾಗರ ನೀನೆ |
ಸ್ವಾತಂತ್ರ್ಯ ಪ್ರೇಮಿಯು |
ಮಾತೆ ಬಳಿಯಲಿ ಇಂದು | ಎಕೆ ಭರದಲಿ ಹೋದೆ || ೨ ||

ಯಾವ ದುಷ್ಟನು ನಿನಗೆ |
ಯಮನಾಗಿ ತಾ ಬಂದು |
ಪೂರ್ವ ಜನ್ಮದ ವೈರಿ | ಅವನಲ್ಲವೆ ತಂದೆ || ೩ ||

ಜಗದ ಜ್ಯೋತಿಯು ನೀನೆ |
ಜಗಕೆಲ್ಲ ಆಧಾರ !
ಗಗನದಲಿ ಪಸರಿಸಿತು | ನಿನ್ಮಯು ಕೊಲೆಯು ಸುದ್ದಿ || ೪ ||

ಸೃಷ್ಟಿಕರ್ತನೆ ನಿನಗೆ |
ಭಾರತವು ಬೇಡುವುದು |
ಪ್ರೇಮ ಗಾಂಧಿಯ ಆತ್ಮಕ್ಕೆ | ಶಾಂತಿ ನೀಡೆಂದು || ೫ ||

[ಲೊ]

॥ ವಂದೇ ಮಾತರಂ ॥
ಶ್ರೇಷ್ಠವಾದ
ರಾಜಪುರಿ ಹೊಗೇಸೊಪ್ಪಿನಿಂದ
— ತಯಾರಿಸಲ್ಪಟ್ಟದ್ದು —
ಕಾಂಗ್ರೆಸ್
(ರಜಿಸ್ಟರ್ಡ್)
ಂಗಳೂರು
ಗಳು
ಕೊ ವರ್ಕ್ಸ್

ವುಡ್ ಲ್ಯಾಂಡ್ಸ್
ಕೀರ್ತಿದಾಯಕ 4 ನೆ ವಾರ
DIN-RAAT
ಸ್ನೇಹಪ್ರಭಾ
ಸುರೇಶ್ ಬ್ಯಾನರ್ಜಿ
ಪಾತ್ರವಹಿಸಿರುವ
ದಿನ್-ರಾತ್
(ಅನೋಖ ಹಿಂದೀ ಚಿತ್ರ)
— Films Release —

At Opera
ಯಶಸ್ವಿ 2 ನೇ ವಾರ
ಕನ್ನಾಂಬಾ, ಚಿನ್ನಪ್ಪ
ಕೃಷ್ಣ, ಮಧುರಂ
ಪಾತ್ರವಹಿಸಿರುವ

ಪೌರಸಭಾಧ್ಯಕ್ಷರ ವಿನಂತಿ

ಈ ತಿಂಗಳು ಹನ್ನೆರಡನೇ ತಾರೀಖು ಗುರುವಾರದ ದಿವಸ ಸಂಸ್ಥಾನಾವಳಿ ಮಹಾತ್ಮಾ ಗಾಂಧೀಜೀಯವರ ಅಂತ್ಯ ಕ್ರಮದ ಕಾರ್ಯಕ್ರಮವಾಗಿ ಮೆರವಣಿಗೆಗಳು ಪ್ರಾರ್ಥನಾ ಸಭೆ ಮುಂತಾಗಿ ಏರ್ಪಾಡುಗಳನ್ನು ಕೇಂದ್ರೀಕರಿಸಿ ನಡೆಸ ತಕ್ಕದ್ದು ಉಚಿತವಾಗಿರುವ ಕಾರಣ ಸೂದು ನಗರ ಕಾಂಗ್ರೆಸ್ ಕಮಿಟಿ ೨ ದಿನದ ಕಾರ್ಯಕ್ರಮಗಳೊಡನೆ ಸಮಿತಿಗಳೂ ಸಮಾಜಗಳೂ ಮುಂ ಎಲ್ಲರೂ ಒಟ್ಟುಗೂಡಿ ಕಾರ್ಯಕ್ರ ಲ್ಲಿ ಭಾಗಿಗಳಾಗಬೇಕಾಗಿ ಕೋರಿದೆ. ಕಾರ್ಯಕ್ರಮದ ವಿವರಗಳನ್ನು ಹಸ್ತ ಪ್ರತಿಕೆಗಳ ಮುಖೇನ ಮತ್ತು ಆಕಾಶ ವಾಣಿ ಮುಖೇನ ಪ್ರಚಾರಮಾಡಲಾಗು ವುದು. ಇತರ ಸಂಸ್ಥೆಗಳು ಮತ್ತು ಪುಹ ರೀಯರುಗಳು ನಗರ ಕಾಂಗ್ರೆಸ್ ಸಮಿತಿ ಯಿಂದ ಅಧ್ಯಕ್ಷರು ಅಥವಾ ಕಾರ್ಯ ದರ್ಶಿಗಳೊಡನೆ ತಮ್ಮತಮ್ಮ ಕಾರ್ಯ ಕ್ರಮಗಳನ್ನು ತಿಳಿಸಿ ಕಾರ್ಯಕ್ರಮಗ ಳನ್ನು ಒಟ್ಟುಗೂಡಿ ಯಶಸ್ವಿಯಾಗಿಯೂ ಸುಲಭವಾಗಿಯೂ ನಡೆಸಲು ಮತ್ತು ರಾಷ್ಟ್ರ ಬಾಪೂಜಿಯವರಲ್ಲಿ ನಮ್ಮೆಲ್ಲರಿಗೂ ಇರತಕ್ಕ ಭಕ್ತಿವಿಶ್ವಾಸವನ್ನೂ ನಮ್ಮ ಭಾಷ್ಪಾಂಜಲಿಯನ್ನೂ ಅರ್ಪಿಸಲು

ಜವಳಿ ವರ್ತಕ ಸಂಘ

ಮಹಾತ್ಮಾ ಗಾಂಧಿಯವರ ನಿಧನದ ಬಗ್ಗೆ ತಾ || 12-2-48 ನೇ ಗುರುವಾರ ಪ್ರಾತಃಕಾಲ 8 ಗಂಟೆಗೆ ಸಂಘದ ಸದಸ್ಯರೆಲ್ಲರೂ ಬಾಪೂಜೀಯವರ ಫೋಟೋ ಸಮೇತ, ಶಿವರಾಂಪೇಟೆ, ಸಯ್ಯಾಜಿರಾವ್ ರೋಡು, ಕಬೀರ್ ರಸ್ತೆ ಮತ್ತು ಅಶೋಕಾ ರಸ್ತೆಗಳಲ್ಲಿ ಮೆರವಣಿಗೆ ಬಂದು ಸಂಘದ ಕಟ್ಟಡದಲ್ಲಿ ಹತ್ತೂವರೆ ಗಂಟೆಗೆ ವಿಶೇಷ ಪೂಜೆ ಜರುಗಿಸುತ್ತಾರೆ.

ಅದೇ ದಿನ ಮಧ್ಯಾಹ್ನ 3 ಗಂಟೆಯಿಂದ ಸಂಜೆ 6 ಗಂಟೆವರೆವಿಗೆ ಬಡವರಿಗೆ ಅಂದರೆ ಅಂಗಹೀನರಿಗೂ, ವೃದ್ಧರಿಗೂ ಕುರುಡರಿಗೂ ಬಟ್ಟೆ ಹಂಚುವಿಕೆಯು ಸಂಘದ ಆವರಣದಲ್ಲಿ ಏರ್ಪಾಟು ಮಾಡಿರುತ್ತದೆ ಎಂದು ಮೈಸೂರು ನಗರ ಜವಳೀ ವರ್ತಕ ಸಂಘದ ಗೌರವ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಸಹಕರಿಸಬೇಕಾಗಿ ಪೌರಸಭೆಯ ಅಧ್ಯಕ್ಷರಾದ ಶ್ರೀಯುತ ಪಾಲಹಳ್ಳಿ ಸೀತಾರಾಮಯ್ಯನವರು ಪ್ರಾರ್ಥಿಸುತ್ತಾರೆ.

Edited, Printed and Publishd by M S Krishna Rao at the Satyavadi Press Chamaraja Agahar Myrsore

ಹಡಗು ಮಾರ್ಕಿನ ಹಿಂಗಿನ ಪುಡಿ

ಹೆಚ್ಚಿನ ಗುಣವುಳ್ಳದ್ದು



ಈ ಹಿಂಗಿನ ಪುಡಿ ನೀರನ್ನು ಸೇರಿಸದೆ ತಯಾರಿಸಿದ ಶಾಸ್ತ್ರೀಯ ಪರಿಶುದ್ಧವಾದದ್ದು. ಎಲ್ಲಾ ಸನಾತನಧರ್ಮ ಸಂಸಾರಗಳಲ್ಲೂ ಉಪಯೋಗಿಸಲರ್ಹವಾದುದು. ಆಹಾರ ಪದಾರ್ಥಗಳಿಗೆ ಒಂದು ಚಿಟಿಗೆ ಪುಡಿಯನ್ನು ಸೇರಿಸಿದ್ದೇ ಆದರೆ, ಅತಿ ಸುಮನೋಹರ ವಾಸನೆಯನ್ನು ಮತ್ತು ರುಚಿಯನ್ನು ಕೊಡುತ್ತದೆ. ಬೇಹದ ಎಲ್ಲಾ ವ್ಯಾಧಿಗಳಿಗೂ ಉಪಯುಕ್ತವಾದ ಸಂಸಾರದ ಔಷಧಿ. ಒಂದು ಪಲ ಉಪಯೋಗಿಸದಲ್ಲಿ ಮತ್ತೆ ಬೇಕಾವುದನ್ನೂ ಉಪಯೋಗಿಸದಂತೆ ಮಾಡುವುದಲ್ಲದೇ, ಇದನ್ನೇ ಪದಾ ಉಪಯೋಗಿಸುವಂತೆ ಪ್ರೇರೇಪಿಸುವುದು. ಒಂದು ಪೌಂಡು ಈ ಹಿಂಗು ನಾಲ್ಕು ಪೌಂಡ ಬಿಳೀ ಹಿಂಗಿಗೆ ಸಮಾನವಾದುದು.

ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲಿಯೂ ಒಂದು ಪೌಂಡು, ಓಂದ ಸೇರು ಅರ್ಧ ಸೇರು, ಒಂದು ಪಲಂ (ವ್ಯಾಕೆಟ್ಟುಗಳಲ್ಲಿ) ದೊರೆಯುತ್ತದೆ ಒಂದು ಪೌಂಡಿನ ಬೆಲೆ ರೂ. 3-8-0

ನಮ್ಮ ಎ ಮತ್ತು ಟಿ. ಜಿ. ಮಾರ್ಕಿನ ಬಿಳೀ ಹಿಂಗು ಮತ್ತು ನಮ್ಮ ತ್ರೀ ಓಂ ಮಾರ್ಕಿನ ಶುದ್ಧ ಕೇಸರಿ, ಸರ್ವ ಮಾರ್ಕಿನ ಕೇಸರಿ ಮತ್ತು ಸುವಾಸನೆ ಅಡಿಕೆ ಪುಡಿ ನಮ್ಮ ವೈಶಿಷ್ಟ್ಯ.

ವಲ್ಲಭದಾಸ್ ತೇಜ್‌ಪಾಲ್

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಎಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್

ಹರಾಜು ನೋಟೀಸು

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—ಜಯಲಕ್ಷ್ಮಿಪುರಂನಲ್ಲಿ ನಿವೇಶನ ಮುಂದಿರವನ್ನು ಕಟ್ಟಲು ಒಂದು ಭಾರಿ ನಿವೇಶನವನ್ನು, ನಿವೇಶನದ ಬಳಿ ತಾ || 16—2—48 ನೇ ಸೋಮವಾರ ಬೆಳಿಗ್ಗೆ 10 ಗಂಟೆಗೆ ಹರಾಜು ಮಾಡಲಾಗುತ್ತೆ.

ಹೆಚ್ಚಿನ ವಿವರಗಳನ್ನು ಛೇರ್ಮೆರ್‌ರವರ ಆಫೀಸಿನಿಂದ ತಿಳಿದುಕೊಳ್ಳಬಹುದು.

ನಿವೇಶನದ ಅಳತೆ 6302 ಚದರ ಗಜಗಳು.

(ಸಹಿ) ಪಿ. ಸೀತಾರಾಮಯ್ಯ

ಛೇರ್ಮೆರ್

ಗ್ರೈಪ್ ನಿರಪ

ಟ್ರೇಡ್ ITL ಮಾರ್ಕ್

ಎಳೆಯ ಮಕ್ಕಳ ಜೀರ್ಣಶಕ್ತಿಯನ್ನು ಬಲಪಡಿಸುವ ಷರಬತ್ತು. ಗ್ರೈಪ್ ನಿರಪ್ ರುಚಿ ಸಿಹಿಯಾಗಿಯೂ ಮತ್ತು ಆಹ್ಲಾದ ಉಂಟುಮಾಡುವುದಾಗಿಯೂ ಇರುವುದರಿಂದ ಮಕ್ಕಳ ಸೇವನೆಗೆ ಅನುಕೂಲವಾದುದು.

ಪ್ರತಿಯೊಬ್ಬ ತಾಯಿಯೂ ಮನೆಯಲ್ಲಿ ಈ ಔಷಧಿಯ ಒಂದನ್ನು ಯಾವಾಗಲೂ ಕೈಗಾವಲಾಗಿಟ್ಟುರುವುದು ಅತ್ಯವಶ್ಯಕ

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.

Malleswaram P. O. Bangalore

SHAKTI SUDHA

A Superb TONIC